**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/15**

ಡಿಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಮತಾ |
| ಗಂಡನ ಹೆಸರುಃ | : | ಸೋಮೇಗೌಡ |
| ವಯಸ್ಸುಃ | : | 58 ವರ್ಷ |
| ಉದ್ಯೋಗಃ | : | ಅಂಗನವಾಡಿಯಲ್ಲಿ ಕಾರ್ಯಕರ್ತೆ |
| ವಾಸ | : | ಗಂಜಿಗೆರೆ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 29.07-2026:**

**ಮುಖ್ಯ ವಿಚಾರಣೆಃ ಆರೋಪಿತರ ಪರ ವಕೀಲರಿಂದ**

ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಅಣ್ಣ. ನನ ತಂದೆಗೆ ನಾವು ನಾಲ್ಕು ಜನ ಮಕ್ಕಳು. ನನಗೆ ಓರ್ವ ತಮ್ಮ ತಂಗಿ ಇದ್ದಾರೆ, ಅವರುಾ ಕೂಡ ಸರ್ಕಾರಿ ಕೆಲಸದಲ್ಲಿ ಇದ್ದಾರೆ. ನಮ್ಮ ಕುಟುಂಬದಲ್ಲಿ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇತ್ತು. ಆ ಆಸ್ತಿಯನ್ನು ನನ್ನ ಅಣ್ಣ ಆರೋಪಿತರೇ ನೋಡಿಕೊಳ್ಳುತ್ತಿದ್ದರು. ಅದಕ್ಕೆ ನಾವು ಸಮ್ಮತಿ ಪತ್ರ ಮಾಡಿಕೊಟ್ಟಿರುತ್ತೇವೆ. ಆ ಸಮ್ಮತಿ ಪತ್ರ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-169ರ ಪುಟ ಸಂಖ್ಯೆ 112ಎ ರಲ್ಲಿ ಇರುವ ದಾಖಲೆ ತೋರಿಸಿದಾಗ ಅದೇದಾಖಲೆ ತಾವು ಬರೆದುಕೊಟ್ಟಿರುವುದೆಂದು ನುಡಿಯುತ್ತಾರೆ. ಈ ದಾಖಲೆಯಲ್ಲಿ ಕರಾರು ಪತ್ರ ಎಂದು ಬರೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-2 ಎಂದು ಸಾಕ್ಷಿಯು ಗುರುತಿಸಿದ ರುಜುವನ್ನು ನಿಡಿ-2(ಎ) ಎಂದು ಗುರುತಿಸಲಾಯಿತು.

2.ಆರೋಪಿತರು ಹೈನುಗಾರಿಕೆ ಕೂಡ ಮಾಡುತ್ತಿದ್ದರು. ಆಸ್ತಿ ಮತ್ತು ಹೈನುಗಾರಿಕೆಯ ಆದಾಯ ಮತ್ತು ನಿರ್ವಹಣಾ ವೆಚ್ಚವನ್ನು ಆರೋಪಿತರೇ ನೋಡಿಕೊಳ್ಳುತ್ತಿದ್ದರು. ಹೈನುಗಾರಿಕೆಗೆ

ಬೇಕಾದ ಆಹಾರವನ್ನು ಅವರು ಜಮೀನಿನಲ್ಲಿಯೇ ಬೆಳೆಯುತ್ತಿದ್ದರು.

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಿಡಿ-2ರ ಕರಾರು ಪತ್ರವನ್ನು ಯಾವಾಗ ಬರೆದುಕೊಟ್ಟದ್ದೆಂದು ನನಗೆ ನೆನಪಿಲ್ಲ. ಆ ಪತ್ರವನ್ನು ನೋಂದಣಿ ಮಾಡಿಸಬೇಕೆಂದು ನಾನು ನನ್ನ ಅಣ್ಣನಲ್ಲಿ ಕೇಳಿರುತ್ತೇನೆ. ಕರಾರು ಪತ್ರವನ್ನು ಏತಕ್ಕೆ ಮಾಡಿಕೊಟ್ಟರೆಂದರೆ ಸಾಕ್ಷಿಯು ನಮ್ಮ ತಂದೆ ತಾಯಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು, ಹಾಗಾಗಿ ಅವರಿಗೇ ಬಿಟ್ಟುಕೊಟ್ಟೆವು ಎನ್ನುತ್ತಾರೆ. ಆ ಕರಾರು ಪತ್ರದಲ್ಲಿ ಯಾವ ಯಾವ ಸರ್ವೆ ನಂಬರ್ ಸೇರಿದೆ ಎಂದು ನನಗೆ ನೆನಪಿಲ್ಲ. ನನ್ನ ಅಣ್ಣನಿಗೆ ನಾವು ಯಾವತ್ತೂ ನಿಡಿ-2 ರ ಕರಾರನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರಿಗೆ ಈ ಕೇಸಿನಲ್ಲಿ ಅನುಕೂಲವಾಗಲೆಂದು ಅದನ್ನು ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**